

ಅಮೆರಿಕದ ಕಾಡು ಕುದುರೆ ಮುಸ್ಟಾಂಗ್



ಹೆಲಿಕಾಪ್ಟರ್ ಬಳಸಿ ಕಾಡು ಕುದುರೆ ಕೊಲ್ಲುವ ಸಂಚು

ಅವು ದಾಟಿಬಂದ ಸಹಜ ಸೇತುವೆಗಳು ಮುರಿದು ಬಿದ್ದಿರಬಹುದು ಎಂಬುದು ಒಂದು ಊಹೆ. ಕುದುರೆ ತಜ್ಞರು ಹೇಳುವಂತೆ ಇವು ಮೂರು ಭಿನ್ನ ಬಗೆಯವು – ವಿಜ್ಞಾನದ ಪರಿಭಾಷೆಯಲ್ಲಿ ಪ್ರಭೇದಗಳು: ಮಧ್ಯ ಏಷ್ಯದ ಮಂಗೋಲಿಯ ಕುದುರೆ, ಪೂರ್ವ ಯೂರೋಪಿನ ಮತ್ತು ಉಕ್ರೇನಿನ ಹುಲ್ಲುಗಾವಲನ್ನು ಆಶ್ರಯಿಸಿದ ಟಾರ್ಪನ್ ಕುದುರೆ, ಉತ್ತರ ಯೂರೋಪಿನ ಅಲೆಮಾರಿ ಕುದುರೆಗಳು. ಇದಕ್ಕೆ ಸಾಕ್ಷಿಗಳು ಅವಶೇಷ ರೂಪದಲ್ಲಿ ಸಾಕಷ್ಟು ಸಿಕ್ಕಿವೆ. ಮೂಲದಲ್ಲಿ ಎಲ್ಲವೂ ಕಾಡು ಕುದುರೆಗಳೇ. ಆದರೆ ಕಾಡಿನಲ್ಲಿ ಅಂಡಲೆಯುತ್ತಿದ್ದ ಸಾಧು ಕುದುರೆಗಳನ್ನು ಪಳಗಿಸಲು ಸುಲಭವಾಯಿತು. ಕೆಲವು ತಪ್ಪಿಸಿಕೊಂಡು ಹೋದವು; ಅವನ್ನು 'ಫೆರಲ್' ಎಂದೇ ಈಗಲೂ ಕರೆಯುವುದುಂಟು.

ಮಂಗೋಲಿಯ ಕುದುರೆಯಾಗಲಿ, ಟಾರ್ಪನ್ ಕುದುರೆಗಳಾಗಲಿ ಪಳಗಿಸಲು ಸುಲಭವಾಗಿ ಸಿಕ್ಕಲಿಲ್ಲ. ಮೇಲಾಗಿ ಅವು ಅಷ್ಟೇನೂ ಆಕರ್ಷಕವಾಗಿಯೂ ಇರಲಿಲ್ಲ. ಸ್ಪ್ಯಾನಿಷರು ತಾವು ಸಾಕಿದ ಕುದುರೆಗಳನ್ನು ದಕ್ಷಿಣ ಅಮೆರಿಕದ ಮೂಲಕ ಉತ್ತರ ಅಮೆರಿಕಕ್ಕೂ 15ನೇ ಶತಮಾನದಲ್ಲಿ ತಂದರು. ಅಮೆರಿಕದಲ್ಲಿ ಮತ್ತೆ ಕುದುರೆ ಸಂತಾನ ವೃದ್ಧಿಯಾಯಿತು. ನಿಜವಾದ ಅರ್ಥದಲ್ಲಿ ಹೇಳುವುದಾದರೆ, ಟರ್ಪಾನ್ ಮತ್ತು ಮಂಗೋಲಿಯ ಕುದುರೆಗಳಷ್ಟೇ ನಿಜವಾದ ಕಾಡು ಕುದುರೆಗಳು. ಇದೀಗ ಜಗತ್ತಿನಾದ್ಯಂತ ಕಾಡು ಕುದುರೆಗಳಾಗಿ ಹೆಚ್ಚು ಸದ್ದುಮಾಡುತ್ತಿರುವುವು ಈಗಿರುವ ಸಾಕು ಕುದುರೆಗಳ ಹತ್ತಿರ ಸಂಬಂಧಿ. ಆದರೆ ಕಾಡಲ್ಲೇ ಇರುವುದರಿಂದ ಸಹಜವಾಗಿಯೇ ಅವನ್ನು ಕಾಡು ಕುದುರೆ ಎನ್ನುವುದುಂಟು. ಇವಕ್ಕೆ ಅದೇ ವೇಗವಿದೆ, ಅದೇ ನಾಗಾಲೋಟವಿದೆ. ಗುಂಪಿನಲ್ಲಿರುವುದೇ ಹೆಚ್ಚು. ಗಂಡು ಕುದುರೆ ಸದಾ ರಕ್ಷಣೆಯ ಜವಾಬ್ದಾರಿ ಹೊತ್ತು ಹಿಂಡಿನ ಹಿಂದೆ ಸಾಗುತ್ತವೆ. ಒಂದೇ ಸಂಗಾತಿಯೊಡನೆ ಕೊನೆಯವರೆಗೂ ಬಾಳು. ಟಾರ್ಪನ್ ಕುದುರೆ ಸಂಪೂರ್ಣವಾಗಿ ವಂಶ ನಷ್ಟಗೊಂಡಿವೆ. ನವಶಿಲಾಯುಗದಿಂದ ತೊಡಗಿ, 20ನೆಯ ಶತಮಾನದವರೆಗೆ ನಿರಂತರ ಬೇಟೆಗೆ ತುತ್ತಾದವು, ದಕ್ಷಿಣ ಯೂರೋಪಿನಿಂದ ಪ್ರಾರಂಭವಾಗಿ ರಷ್ಯದವರೆಗೂ ವಿಸ್ತರಿಸಿದ್ದ ಅವು ವಂಶ ನಷ್ಟವಾಗುತ್ತ ಬಂದವು. ಕೊನೆಗೆ ರಷ್ಯಾದಲ್ಲಿ ಮೃಗಾಲಯದಲ್ಲಿಟ್ಟಿದ್ದ ಕೊನೆಯ ಟಾರ್ಪನ್ ಕುದುರೆಯೂ 1909ರಲ್ಲಿ ಕೊನೆಯುಸಿರೆಳೆಯಿತು. ನೋಡಲು ಸ್ವಲ್ಪ ಜಿಂಕೆಯ ಮೂತಿಯದು, ಆದರೆ ಕತ್ತು ಮಾತ್ರ ಈಗಿನ ಕುದುರೆಯಂತೆಯೇ. ಮುಂಚಾಚಿದ ಶರೀರದಂತೆ ಕಾಣುವ ಟಾರ್ಪನ್ ಕುದುರೆ ಈಗ ನೆನಪು ಮಾತ್ರ. ಇನ್ನು ಮಂಗೋಲಿಯದ ಕುದುರೆಗಳು ಕೂಡ ಅಳಿವಿನಂಚಿಗೆ ತಲುಪಿದ್ದವು. ಅವುಗಳ ಹುಲ್ಲುಗಾವಲು ಕೃಷಿಗೆ ಈಡಾಯಿತು. ಮೇಯಲು ಸ್ಪರ್ಧೆ. ಮೊದಲೇ ಮರಳುಗಾಡು. ನೀರಿನ ಕೊರತೆ ಬೇರೆ. ಸಾಲದೆಂಬಂತೆ ಸಣ್ಣ ಗುಂಪು, ಅವುಗಳೊಳಗೇ ಸಂತಾನವರ್ಧನೆ. 'ಜೀನ್‌ಪೂಲ್' ಎನ್ನುತ್ತಾರಲ್ಲ, ಅದು ಸೀಮಿತವಾಯಿತು. ವೈವಿಧ್ಯ ತಳಿಗಳು ಬೆಳೆಯಲೇ ಇಲ್ಲ. 1968ರಲ್ಲಿ ಸಣ್ಣದೊಂದು ಗುಂಪು ಮಂಗೋಲಿಯ ಮರುಭೂಮಿಯಲ್ಲಿ ಅಡ್ಡಾಡುತ್ತಿತ್ತು. ಅವನ್ನು ಹಿಡಿದು ಮೃಗಾಲಯದಲ್ಲಿ ಬೆಳೆಸಿ ಸಂತತಿ ಹೆಚ್ಚಿಸಿ ಬೇರೆ ಬೇರೆ ಸಹಜ ಆವಾಸಗಳಿಗೆ ಬಿಟ್ಟ ಮೇಲೆ ಅವುಗಳ ಸಂಖ್ಯೆ ಹೆಚ್ಚಿತು, ಈಗ ಸುಮಾರು 2000 ದಾಟಿವೆ. ಸ್ವಲ್ಪ ಕತ್ತೆಯ ಮೂತಿ, ಕತ್ತೆಯ ಚರ್ಮದಂತೆಯೇ ಬೂದುಬಣ್ಣದ್ದು ಇವೆ, ಕಂದುಬಣ್ಣದ್ದೂ ಇವೆ. ಇತ್ತೀಚೆಗೆ ರಷ್ಯಾದ ಕಡೆಗೂ ಅವು ಪಯಣ ಬೆಳೆಸಿವೆ. ಚರ್ನೊಬಿಲ್‌ನ ಪರಮಾಣು ಸ್ಥಾವರ ದುರಂತ ಭಾಗ ಈಗ ಕಾಡಾಗುತ್ತಿದೆ. ಅಲ್ಲಿ ಇತ್ತೀಚೆಗೆ ಇವು ಕಾಣಿಸಿಕೊಂಡಿವೆ. ಆದರೂ ವಿಶ್ವಸಂಸ್ಥೆ ಇವನ್ನು ಅಳಿವಿನಂಚಿನ ಜೀವಿಗಳ ಪಟ್ಟಿಗೆ ಸೇರಿಸಿದೆ.

## ಅಮೆರಿಕದಲ್ಲಿ 'ನಂಬರ್ 1 ಎನಿಮಿ'

ಅಮೆರಿಕದಲ್ಲಿ ಕಾಡು ಕುದುರೆಗಳನ್ನು 'ಮುಸ್ಟಾಂಗ್' ಎನ್ನುತ್ತಾರೆ. ಅಂದರೆ ಮಾಲೀಕರಿಲ್ಲದ, ಉಂಡಾಡಿಗುಂಡ. ಹೆಚ್ಚಿನ ಪಾಲು ಅಮೆರಿಕದ ಪಶ್ಚಿಮ ಭಾಗದ ಹತ್ತು ರಾಜ್ಯಗಳ ಕಾಡಿನ ಹುಲ್ಲುಗಾವಲಿನಲ್ಲಿ ಈ 'ಮುಸ್ಟಾಂಗ್'ಗಳಿವೆ. ಒಂದೆಡೆ ಕೃಷಿ ವಿಸ್ತರಣೆಯಿಂದ ಹುಲ್ಲುಗಾವಲುಗಳ ಒತ್ತುವರಿಯಾಗುತ್ತಿದೆ. ಹಾಲು ಉತ್ಪಾದನೆ, ಮಾಂಸದ ರಾಸುಗಳ ಅಭಿವೃದ್ಧಿಗೆ ಆದ್ಯತೆ ಸಿಕ್ಕಿ ಅದರ ಪರಿಣಾಮವನ್ನು



ಆನ್‌ಲೈನ್‌ನಲ್ಲಿ ಕುದುರೆಗಳ ಹರಾಜು